# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)
## ಕರ್ನಾಟಕ

**ಮಾನ್ಯ ಸಂಪಾದಕರೆ, ವರದಿಗಾರರೆ,**

**ಹೋರಾಟದ ವಂದನೆಗಳು.**

ರೈಲ್ವೆ ಇಲಾಖೆಯಲ್ಲಿನ ಸಿ ಮತ್ತು ಡಿ ದರ್ಜೆಯ ಉದ್ಯೋಗಾವಕಾಶಗಳ ಬಗ್ಗೆ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂಬ ಜನರ ಹಕ್ಕೊತ್ತಾಯದ ಕುರಿತು ನಮ್ಮ ಈ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಪರಿಗಣಿಸಿ ಪ್ರಕಟಿಸಬೇಕಾಗಿ ಕೋರಿಕೆ.

**ಕ್ರಾಂತಿಕಾರಿ ಶುಭಾಶಯಗಳೊಂದಿಗೆ,**

**ಗಂಗಾಧರ್**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**12 ಜನವರಿ, 2008**

ಕೇಂದ್ರದ ಅಧೀನದಲ್ಲಿರುವ ರೈಲ್ವೆ ಇಲಾಖೆಯಲ್ಲಿ ಸಿ ಮತ್ತು ಡಿ ದರ್ಜೆ ಉದ್ಯೋಗಾವಕಾಶಗಳಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂಬ ಜನರ ಹಕ್ಕೊತ್ತಾಯವನ್ನು ಹಾಗೂ ಅದಕ್ಕಾಗಿ ನಡೆಯುತ್ತಿರುವ ಜನರ ಹೋರಾಟಗಳನ್ನು ನಾವು ಬೆಂಬಲಿಸುತ್ತೇವೆ.

ಭಾರತದ ಇತರ ರಾಜ್ಯಗಳಲ್ಲಿ ನೆಲೆಸಿರುವ ಜನಸಾಮಾನ್ಯರು ಕೂಡ ಇದೇ ರೀತಿಉದ್ಯೋಗಾವಕಾಶಗಳಿಂದ ವಂಚಿತರಾಗಿರುವವರೇ ಆಗಿದ್ದಾರೆ. ಅವರು ಕೂಡ ತೀವ್ರ ಸಂಕಷ್ಟಗಳಿಗೆ ಒಳಗಾಗಿರುವವರೇ ಆಗಿದ್ದಾರೆ. ಹಾಗಾಗಿ ಅವರ ಮೇಲೆ ಯಾವುದೇ ರೀತಿಯ ದಾಳಿಗಳಿಗೆ ಇಳಿಯಬಾರದೆಂದು ನಾವು ಹೋರಾಟನಿರತ ಜನರಲ್ಲಿ ಮನವಿ ಮಾಡುತ್ತಿದ್ದೇವೆ. ಕರ್ನಾಟಕದ ಸಾಹಿತಿಗಳು ಈ ಹೋರಾಟದಲ್ಲಿ ಪಾಲ್ಗೊಂಡಿರುವುದು ಪ್ರಶಂಸನೀಯವಾದುದು. ಎಲ್ಲಾ ಸಾಹಿತಿ, ಕಲಾವಿದರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು, ರೈತರು, ಕಾರ್ಮಿಕರೊಂದಿಗೆ ಇಂತಹ ಹೋರಾಟಗಳಲ್ಲಿ ಪಾಲ್ಗೊಳ್ಳಬೇಕಾದ ಅಗತ್ಯವಿದೆ.

ಕೇಂದ್ರ ಸರ್ಕಾರಿ ಉದ್ಯೋಗಗಳಲ್ಲಿ ಈ ರೀತಿಯ ಅವೈಜ್ಞಾನಿಕ ಹಾಗೂ ಅನ್ಯಾಯದ ನೀತಿಗಳ ಅಳವಡಿಕೆಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಹೊಣೆಗಾರರಾಗಿವೆ. ಇದರಲ್ಲಿ ಹಿಂದಿ ಹೇರಿಕೆಯ ಹುನ್ನಾರ ಕೂಡ ಅಡಗಿದೆ. ಅಖಿಲ ಭಾರತ ಆಳುವ ವರ್ಗಗಳು ತಮ್ಮ ಹಿತಾಸಕ್ತಿಗೆ ತಕ್ಕಂತೆ ಹಿಂದಿ ಹೇರಿಕೆಯನ್ನು ಪರೋಕ್ಷ ಹಾಗೂ ಪ್ರತ್ಯಕ್ಷವಾಗಿ ಮಾಡುತ್ತಾ ಬರುತ್ತಿದ್ದಾರೆ. ಅಷ್ಟೆ ಅಲ್ಲದೆ ರಾಜ್ಯರಾಜ್ಯಗಳ ಜನಸಾಮಾನ್ಯರನ್ನು ಪರಸ್ಪರ ಎತ್ತಿಕಟ್ಟಿ ಹೊಡೆದಾಟಕ್ಕಿಳಿಸುವ ನೀಚ ಒಡೆದಾಳುವ ಕುತಂತ್ರ ಇದಾಗಿದೆ. ಒಂದೆಡೆ ಖಾಸಗೀಕರಣ, ಜಾಗತೀಕರಣ, ಉದಾರೀಕರಣಗಳ ನೀತಿಗಳನ್ನು ಅಳವಡಿಸುತ್ತಾ, ಇರುವ ಉದ್ಯೋಗಾವಕಾಶಗಳನ್ನು ಕಡಿತಗೊಳಿಸುತ್ತಾ, ನಿರುದ್ಯೋಗ ಸಮಸ್ಯೆಗಳಿಂದ ಬಳಲುತ್ತಿರುವ ಜನಸಾಮಾನ್ಯರನ್ನು ಪರಸ್ಪರ ಹೊಡೆದಾಟಕ್ಕಿಳಿಸಲಾಗುತ್ತಿದೆ. ಇದು ಜನರನ್ನು ನಿಜವಾದ ಸಮಸ್ಯೆಗಳಿಂದ ಪಕ್ಕ ಸರಿಸಿ ತಮ್ಮ ಪಕ್ಕದ ಜನಸಾಮಾನ್ಯರೆ ತಮ್ಮ ಶತೃಗಳೆಂಬಂತೆ ಪರಸ್ಪರ ಎತ್ತಿಕಟ್ಟುವ ನೀಚತನ ಇದಾಗಿದೆ. ನೀರು ಹಂಚಿಕೆ, ಗಡಿ ...... ಇತ್ಯಾದಿ ವಿಚಾರಗಳಲ್ಲೂ ಇದೇ ನೀತಿಗಳನ್ನು ಅನುಸರಿಸಲಾಗುತ್ತಿದೆ.

ಕೇಂದ್ರಾಧಿಪತ್ಯದ ಕಪಿಮುಷ್ಟಿಯಡಿ ಭಾರತದ ಎಲ್ಲಾ ರಾಜ್ಯಗಳ ಜನಸಾಮಾನ್ಯರು ನಲುಗುತ್ತಿದ್ದಾರೆ. ಒಕ್ಕೂಟ ವ್ಯವಸ್ಥೆ (ಸಂಯುಕ್ತ ವ್ಯವಸ್ಥೆ - Federal System), ರಾಜ್ಯಗಳ ಸ್ವಾಯತ್ತತೆ ಇತ್ಯಾದಿಗಳ ನೀತಿಸೂತ್ರಗಳನ್ನು ಗಾಳಿಗೆ ತೂರಲಾಗಿದೆ. ಸರ್ಕಾರಿಯಾ ಆಯೋಗ ರೂಪಿಸಿದ ಕೇಂದ್ರ ರಾಜ್ಯಗಳ ಸಂಬಂಧಗಳ ಕುರಿತಾದ ನೀತಿನಿಯಮಾವಳಿಗಳನ್ನು ಕೂಡ ಕಸದ ಬುಟ್ಟಿಗೆ ಹಾಕಲಾಗಿದೆ.

ಆಯಾ ರಾಜ್ಯಗಳಲ್ಲಿ ಸೃಷ್ಟಿಯಾಗುವ ಉದ್ಯೋಗಾವಕಾಶಗಳಲ್ಲಿ ಸ್ಥಳೀಯರಿಗೆ ಪ್ರದೇಶಾವಾರು ಆದ್ಯತೆ ನೀಡಬೇಕಾದುದು ಅಗತ್ಯವಾಗಿದೆ. ಇದಕ್ಕಾಗಿ ವೈಜ್ಞಾನಿಕ ನೀತಿಸೂತ್ರಗಳನ್ನು ಅಳವಡಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ರೈಲ್ವೆ ನೇಮಕಾತಿತಾರತಮ್ಯವನ್ನು ವಿರೋಧಿಸಿ ಕರ್ನಾಟಕದಾದ್ಯಂತ ನಡೆಯುತ್ತಿರುವ ಹೋರಾಟಕ್ಕೆ ಪ್ರಾಮುಖ್ಯತೆ ಇದೆ. ಈ ಹೋರಾಟ ನಿಜವಾದ ಗಣತಂತ್ರ ಹಾಗೂ ಸಂಯುಕ್ತ ವ್ಯವಸ್ಥೆಯ ಸ್ಥಾಪನೆಯತ್ತ ಸಾಗಬೇಕಾದ ಅಗತ್ಯವಿದೆ. ರಾಜಕೀಯ ಅಧಿಕಾರ, ಸಂಪನ್ಮೂಲ, ಕೈಗಾರಿಕೆ, ಉದ್ಯೋಗ, ಶಿಕ್ಷಣ ..... ಇತ್ಯಾದಿ ಎಲ್ಲಾ ರಂಗಗಳಲ್ಲಿ ಸಂಯುಕ್ತ ವ್ಯವಸ್ಥೆಯ ನೀತಿಸೂತ್ರಗಳ ಅಳವಡಿಕೆಗಾಗಿ ಹೋರಾಟ ಸಾಗಬೇಕಿದೆ.

ಕರ್ನಾಟಕ ಜನರ ಹೋರಾಟ ತೀವ್ರವಾದ ಕೂಡಲೆ ನೇಮಕಾತಿಗಳನ್ನೇ ಮುಂದೂಡಿ ಹೋರಾಟವನ್ನು ದಿಕ್ಕುತಪ್ಪಿಸಲು ಪ್ರಯತ್ನಿಸಲಾಗುತ್ತಿದೆ. ಇದು ಖಂಡನೀಯವಾದುದಾಗಿದೆ. ಕೇಂದ್ರ ಸರ್ಕಾರ ಕೂಡಲೆ ಕರ್ನಾಟಕದಲ್ಲಿ ಅಷ್ಟೆ ಅಲ್ಲದೇ ಆಯಾ ರಾಜ್ಯಗಳಲ್ಲಿ ತನ್ನ ಅಧೀನದಡಿ ಇರುವ ಉದ್ಯೋಗಾವಕಾಶಗಳಲ್ಲಿ ಆಯಾ ರಾಜ್ಯದ ಜನರಿಗೆ ಪ್ರದೇಶಾವಾರು ಆದ್ಯತೆ ನೀಡಬೇಕೆಂದು ಅದಕ್ಕಾಗಿ ವೈಜ್ಞಾನಿಕ ನೀತಿಪ್ರಕಟಿಸಬೇಕೆಂದು ಆಗ್ರಹಿಸುತ್ತಿದ್ದೇವೆ. ಇದಕ್ಕೆ ಒಕ್ಕೂಟ ನೀತಿಸೂತ್ರಗಳು, ಸ್ವಾಯತ್ತತೆಯ ನಿಯಮಗಳನ್ನು ಆಧರಿಸಬೇಕೆಂದು ಒತ್ತಾಯಿಸುತ್ತಿದ್ದೇವೆ.

**ಕ್ರಾಂತಿಕಾರಿ ಶುಭಾಶಯಗಳೊಂದಿಗೆ,**

**ಗಂಗಾಧರ್**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**12 ಜನವರಿ, 2008**